## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
### ವಾರ್ಡ್ 62, ರಾಮಸ್ವಾಮಿಪಾಳ್ಯ
### ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:03–09–2022 ರಂದು ಬುಧವಾರ ಅಪರಾಹ್ನ 3.00 ರ ಸಮಯಕ್ಕೆ ಮಾನ್ಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಡಾ||.ಶಿವೇಗೌಡ ಆರೋಗ್ಯ ವೈದ್ಯಾಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ವಾರ್ಡ್ 62ರ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿಗಳು ಸಮಿತಿ ಸಭೆಗೆ ಹಾಜರಿದ್ದು, ಅಧ್ಯಕ್ಷರ ಸೂಚನೆಯ ಮೇರೆಗೆ ಸಭೆಯನ್ನು ನಡೆಸಿಕೊಟ್ಟರು. ಹಾಗೂ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸದಸ್ಯರುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ: | ಹೆಸರು | ಹಾಜರಿದ್ದ ಅಧಿಕಾರಿಗಳು, ನೌಕರರು, ಪ್ರತಿನಿಧಿಗಳ ವಿವರ |
|---|---|---|
| 1 | ಡಾ||.ಶಿವೇಗೌಡ | ನೋಡಲ್ ಅಧಿಕಾರಿಗಳು (ಆರೋಗ್ಯ ವೈದ್ಯಾಧಿಕಾರಿಗಳು) |
| 2 | ಶ್ರೀ.ಗಿರಿಧರ್ | ಸದಸ್ಯ ಕಾರ್ಯದರ್ಶಿ (ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:62) |
| 3 | ಶ್ರೀ.ಮೊಹಮ್ಮದ್ ರಫಿ | ಸಹಾಯಕ ಅಭಿಯಂತರರು (ಕಿಯೋನಿಕ್ಸ್ ವಾರ್ಡ್ ಸಂಖ್ಯೆ:62) |
| 4 | ಶ್ರೀ. ಅಭಿಲಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮೊಹಮ್ಮದ್ ಫಯಾಸ್ | ಬಿಡಬ್ಲ್ಯೂ ಎಸ್.ಎಸ್.ಬಿ ವಾಟರ್ಇನ್ಸ್‌ಪೆಕ್ಟರ್ |
| 6 | ಶ್ರೀ.ಲಕ್ಷ್ಮಿನರಸಿಂಹ | ಬಿಡಬ್ಲ್ಯೂ ಎಸ್.ಎಸ್.ಬಿ ವಾಟರ್ಇನ್ಸ್‌ಪೆಕ್ಟರ್ |
| 7 | ಶ್ರೀ.ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ.ಚಿನ್ನ | ಪೌರಕಾರ್ಮಿಕರ ಮೇಲ್ವಿಚಾರಕರು |
| 9 | ಶ್ರೀ.ಗಣೇಶ | ಪೌರಕಾರ್ಮಿಕರ ಮೇಲ್ವಿಚಾರಕರು |
| 10 | ಶ್ರೀಮತಿ. ಅನುಸೂಯ.ಕೆ | ಲಿಂಕ್ ವರ್ಕ್ಸ್ |
| 11 | ಶ್ರೀಮತಿ. ಜಯಮ್ಮ | ಲಿಂಕ್ ವರ್ಕ್ಸ್ |
| 12 | ಶ್ರೀ.ಸಂದೀಪ್ | ಬೀದಿ ದೀಪ ವಿಭಾಗ (ಗೈರು ಹಾಜರಿಯಾಗಿರುತ್ತಾರೆ) |
| 13 | ಶ್ರೀಮತಿ. ಕವಿತ | ಕಂದಾಯ ಪರಿವೀಕ್ಷಕರು (ಗೈರು ಹಾಜರಿಯಾಗಿರುತ್ತಾರೆ) |
| 14 | ಶ್ರೀ.ರವಿಶಂಕರ್ | ಸಹಾಯಕ ಅಭಿಯಂತರರು ಬೆಸ್ಕಾಂ (ಗೈರು ಹಾಜರಿಯಾಗಿರುತ್ತಾರೆ) |
| 15 | ಪೊಲೀಸ್ ಸಿಬ್ಬಂದಿ | ಜೆ.ಸಿ ನಗರ ಠಾಣೆ –ಗೈರು ಹಾಜರಿಯಾಗಿರುತ್ತಾರೆ |

ಈ ಕೆಳಕಂಡ ಅಂಶಗಳನ್ನು ಚರ್ಚಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಿದರು.

1) ಆಟೋ ಟಿಪ್ಪರ್/ಕಾಂಪ್ಯಾಕ್ಟರ್‌ಗಳ ಹಾಜರಾತಿ ವಿವರ, ವಾರ್ಡ್ ಮಟ್ಟದಲ್ಲಿ ಕಸ ವಿಂಗಡಣೆಯ ಸುಧಾರಣೆಯ, ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳು ಮತ್ತು ಸಾಧನ ಸಲಕರಣೆಗಳ ಕುಂದುಕೊರತೆಗಳನ್ನು ಹಾಗೂ ಪೌರಕಾರ್ಮಿಕರಿಗೆ ನೀಡಬೇಕಾಗಿರುವ ಸೌಲಭ್ಯಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

2) ವಾರ್ಡ್ ಸಂಖ್ಯೆ:62 ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸದೆ ಇರುವ ಬೀದಿ ದೀಪಗಳನ್ನು ಗುರುತಿಸಿ ತಕ್ಷಣ ದುರಸ್ಥಿ ಮಾಡಲು ಹಾಗೂ ಹೊಸದಾಗಿ ಅವಶ್ಯಕವಿರುವ ಬೀದಿ ದೀಪಗಳನ್ನು ಅಳವಡಿಸಲು ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ (ಪೂರ್ವ) ರವರಿಗೆ ಜರೂರಾಗಿ ಕ್ರಮಕೈಗೊಳ್ಳಲು ಸೂಚಿಸಿದರು.

3) ವಾರ್ಡ್‌ವಾರು ಬೃಹತ್ ನೀರುಗಾಲುಗಳ ವಿವರಗಳ ಬಗ್ಗೆ ಮತ್ತು ಕಾಲುವೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳ ವಿವರ ಹಾಗೂ ಬೃಹತ್ ನೀರುಗಾಗಲುವೆಗಳ ಶಿಥಿಲಗೊಂಡಿರುವ ತಡೆಗೋಡೆಗಳನ್ನು ದುರಸ್ಥಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

4) ವಾರ್ಡ್‌ನಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಪ್ರೇಯಿಂಗ್/ಪಾಗಿಂಗ್‌ಗಳ ವೇಳಾಪಟ್ಟಿ ಮತ್ತು ವಿತರಣೆಯಾಗಿರುವ ವ್ಯಾಪಾರ ಪರವಾನಗಿ ಪಟ್ಟಿ ಬಗ್ಗೆ ಚರ್ಚಿಸಿದರು. ಹಾಗೂ ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಿರಿಯ ಆರೋಗ್ಯ ಸಹಾಯಕಿ, ಆರೋಗ್ಯ ವಿಭಾಗ ರವರಿಗೆ ಸೂಚಿಸಿದರು.

5) ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಗುರುತಿಸಿ ದುರಸ್ಥಿ ಕ್ರಮವಹಿಸಲು ತಿಳಿಸಿದರು. ಹಾಗೂ ರಸ್ತೆ ಮತ್ತು ಚರಂಡಿ ದುರಸ್ಥಿ ಕೆಲಸ ನಿರ್ವಹಿಸಲು. ಅನಧಿಕೃತ ಕಟ್ಟಡ ಹಾಗೂ ಪಾದಚಾರಿ ಮಾರ್ಗಗಳ ಅತಿಕ್ರಮಣ ತೆರವುಗೊಳಿಸಲು ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದರು.

6) ಕಂದಾಯ ವಸೂಲಾತಿ ವಿವರದ ಬಗ್ಗೆ ಚರ್ಚಿಸಿ ಹಾಗೂ ಮತದಾರರ ಗುರುತಿನ ಚೀಟಿ ಪರಿಶೀಲಿಸಿ ಹಾಗೂ ಆಧಾರ್ ಕಾರ್ಡ್‌ನ ಜೊತೆ ಲಿಂಕ್ ಮಾಡಲು ಸೂಕ್ತ ಕ್ರಮವಹಿಸಲು ಕಂದಾಯ ಇಲಾಖೆಯವರಿಗೆ ಸೂಚಿಸಿದರು.

7) ವಾರ್ಡ್‌ನ ಉದ್ಯಾನವನಗಳಲ್ಲಿ ದೀಪಗಳು ಕಾರ್ಯನಿರ್ವಹಿಸುತ್ತಿರುವ ಕುರಿತು ಹಾಗೂ ಶೌಚಾಲಯದ ಸೌಲಭ್ಯದ ಒದಗಿಸಲು ಹಾಗೂ ಉದ್ಯಾನವನಗಳಲ್ಲಿ ಸುಚಿತ್ವ ಕಾಪಾಡಲು ಹಾಗೂ ಗಿಡಗಳ ನಿರ್ವಹಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ತೋಟಗಾರಿಕೆಯವರಿಗೆ ಸೂಚಿಸಿದರು.

8) ವಾರ್ಡ್‌ನಲ್ಲಿ ನೇತಾಡುವ ಕೊಂಬೆಗಳನ್ನು ಹಾಗೂ ರಸ್ತೆ ಅಡಚಣೆಯ ಮರಗಳನ್ನು ಕಟಾವು ಮತ್ತು ತೆರವುಗೊಳಿಸಲು ಅರಣ್ಯ ಇಲಾಖೆಯವರಿಗೆ ಸೂಚಿಸಿದರು.

9) ವಾರ್ಡ್‌ನಲ್ಲಿ ಅನಧಿಕೃತ ಮಾಂಸ ಮಾರಾಟ ಮಳಿಗೆಗಳನ್ನು ಗುರುತಿಸಿ ತೆರವುಗೊಳಿಸಲು ಹಾಗೂ ಸೂಕ್ತಕ್ರಮವಾಗಿ ಮಾಂಸ ತ್ಯಾಜ್ಯ ನಿರ್ವಹಣೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

10) ವಾರ್ಡ್‌ನಲ್ಲಿ ಹೊಸದಾಗಿ ಒಳಚರಂಡಿಗಳ ಹಾಗೂ ನೀರಿನ ಕೊಳವೆ ಮಾರ್ಗಗಳ ವ್ಯವಸ್ಥೆಯ ಕುರಿತು ಹಾಗೂ ದುರಸ್ಥಿ ಕಾಮಗಾರಿಗಳ ಬಗ್ಗೆ ಚರ್ಚಿಸಿದರು.

11) ವಾರ್ಡ್‌ನಲ್ಲಿ ಟ್ರಾಫಿಕ್ ಸಮಸ್ಯೆ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

12) ವಾರ್ಡ್‌ನಲ್ಲಿ ವಿದ್ಯುತ್ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಸೂಕ್ತ ಕ್ರಮ ವಹಿಸಲು ಹಾಗೂ ವಿದ್ಯುತ್ ಕಾಮಗಾರಿ ನಿರ್ವಹಣೆ ವೇಳೆಯಲ್ಲಿ ಕಟಾವು ಮಾಡಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ವಾರ್ಡ್ ಇಂಜಿನಿಯರ್ ಹಾಗೂ ಸದಸ್ಯರಾದ ಶ್ರೀ.ಗಿರಿಧರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:62 ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳು ಮಾನ್ಯ
ವಾರ್ಡ್-62, ರಾಮಸ್ವಾಮಿಪಾಳ್ಯ
ಬಿ.ಬಿ.ಎಂ.ಪಿ

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-62, ರಾಮಸ್ವಾಮಿಪಾಳ್ಯ
ಬಿ.ಬಿ.ಎಂ.ಪಿ

02/09/2022